# ಸಂಬಂಧ

■ ಮಧುರಾ ಕರ್ಣಮ್

ಸೂರ್ಯ ಬಿಸಿಲ ಮಳೆಯನ್ನೇ ಸುರಿಸುತ್ತಿದ್ದ ಹೊತ್ತು. ಮೈಯಲ್ಲಿನ ನೀರೆಲ್ಲ ಬೆವರಾಗಿ ಹರಿಯುವುದನ್ನು ತಾಳಲಾಗದೇ ಮೇಸ್ತ್ರಿ ಕುಪ್ಪುಸ್ವಾಮಿ ಕಟ್ಟುತ್ತಿದ್ದ ಕಟ್ಟಡದಿಂದ ಹೊರಗೆ ನಡೆದ. ಕೆಲಸ ಜೋರಾಗಿ ನಡೆಯುತ್ತಿತ್ತು. ಆಳುಗಳು ಕಬ್ಬಿಣದ ಸಳಿಗಳನ್ನು ಸುತ್ತಿಯಿಂದ ಹೊಡೆದು ಕಂಬಿ ಕಟ್ಟೆ ಸಿದ್ಧಗೊಳಿಸುತ್ತಿದ್ದರು. ಮೋಲ್ಡ್ ಹಾಕುವ ದಿನವೂ ಹತ್ತಿರ ಬಂದಿತ್ತಲ್ಲ. ಕುಪ್ಪುಸ್ವಾಮಿ ಬೀದಿಯ ತಿರುವಿನಲ್ಲಿ ನಿಂತ ಗಾಡಿಯವನಿಂದ ಕಲ್ಲಂಗಡಿ ಹಣ್ಣಿನ ಹೋಳುಗಳನ್ನು ಕೊಂಡು ಟೂಥ್‌ಪೀಕ್‌ನಿಂದ ಒಂದೊಂದನ್ನೇ ಚುಚ್ಚಿ ತಿನ್ನುತ್ತ ಬರುತ್ತಿದ್ದ. ಅದಾವ ಗಳಿಗೆಯಲ್ಲಿ ಎದ್ದಿದ್ದನೋ... ಕಾಂಟ್ರಾಕ್ಟರ್ ಪಳನಿಯಪ್ಪ ಮತ್ತು ಮನೆಯ ಮಾಲೀಕ ಒಟ್ಟಿಗೆ ಅದೇ ಸಮಯಕ್ಕೆ ಬರಬೇಕೆ? ದುಡ್ಡು ಕೊಟ್ಟು ಕೊಂಡಿದ್ದನ್ನು ತಿನ್ನಲೂ ಆಗದೇ ಎಸೆಯಲೂ ಆಗದೇ ಅಲ್ಲೇ ಕಲ್ಲಿನ ಮೇಲಿಟ್ಟು ಅವರ ಹಿಂದೆ ನಡೆದ. 'ಕುಪ್ಪಣ್ಣ, ಇನ್ನೇನು ನಾಲ್ಕೇ ದಿನದಲ್ಲಿ ಮೋಲ್ಡ್ ಹಾಕೋದಲ್ವ... ಒಂದಿನ ಇವರು ಕೆಲಸಗಾರರಿಗೆಲ್ಲಾ ಊಟ ಇಟ್ಕೊಳ್ತಾರಂತೆ. ದುಡ್ಡು ಕೊಡ್ತಾರೆ. ಹೋಟೆಲ್‌ನಿಂದ ತರಿಸಿಬಿಡಿ. ಕೆಲಸ ಚುರುಕು ಮಾಡಿ. ಇನ್ನಿಬ್ಬರು ಕೆಲಸಗಾರರನ್ನ ಕರೆತಂದಿದೀನಿ. ಅವರಲ್ಲೊಬ್ಬ ಬಲು ಚೂಟಿ. ಚಿತ್ರದುರ್ಗದಲ್ಲಿ ನನ್ನ ಸ್ನೇಹಿತನ ಬಳಿ ಕೆಲಸ ಮಾಡ್ತಿದ್ದ. ಅವನಿಗೆ ಚೆನ್ನಾಗಿ ಹೇಳ್ಕೊಡು. ಮುಂದೆ ಭವಿಷ್ಯದಲ್ಲಿ ಒಳ್ಳೆ ಮೇಸ್ತ್ರಿ ಆಗ್ತಾನೆ. ನಮಗೊಬ್ಬ ಒಳ್ಳೆ ರಿಸೋರ್ಸ್ ಸಿಗ್ತಾನೆ' ಎಂದರು ಪಳನಿಯಪ್ಪ. 'ಸರಿ ಸಾ' ಎಂದು ತಲೆಯಾಡಿಸಿದ ಕುಪ್ಪುಸ್ವಾಮಿ ಬಂದ ಮಾಲಿನ ಲೆಕ್ಕ ಕೊಡುತ್ತಾ ನಡೆದ. ಕಲ್ಲಂಗಡಿ ಹೋಳುಗಳು ಕಲ್ಲಿನ ಮೇಲೆ ಅನಾಥವಾಗಿ ಕುಳಿತಿದ್ದವು.

ಸಿಮೆಂಟ್ ಚೀಲಗಳನ್ನು ಲೆಕ್ಕ ಮಾಡಿ ಶೆಡ್‌ನಲ್ಲಿ ಇರಿಸಿದ ಹೊಸ ಹುಡುಗ ಬಹಳ ಮರ್ಯಾದೆ ಕೊಟ್ಟು ಸಾರ್ ಸಾರೆನ್ನುತ್ತಾ ಮಾತನಾಡಿಸಿದ. 'ನಿನ್ನ ಹೆಸರೇನು?' ಎಂದದ್ದಕ್ಕೆ, 'ಮಾದೇಶ ಅಂತ ಸಾರ್. ಹತ್ತನೇ ತರಗತಿ ಮುಗಿಸಿದೀನಿ. ಮೊದಲು ಮಂಡ್ಯದಲ್ಲಿ ಕೆಲಸ ಮಾಡ್ತಾ ಇದ್ದೆ' ಎಂದು ತನ್ನ ಪ್ರವರವನ್ನೇ ಬಿಚ್ಚಿದ. 'ಇನ್ನೊಬ್ಬ ಹುಡುಗ ಎಲ್ಲಿದ್ದಾನೆ?' ಎಂದಾಗ, ಕಟ್ಟಡದ ಹಿಂಭಾಗದತ್ತ ಕೈ ತೋರಿದ. ಪಳನಿಯಪ್ಪ ಹೊಗಳಿದ ಚಿತ್ರದುರ್ಗದಿಂದ ಬಂದ ಹುಡುಗನನ್ನು ಕಾಣುವ ಕುತೂಹಲ ತೀವ್ರವಾಗಿ ಅತ್ತಲೇ ನಡೆದ ಕುಪ್ಪಣ್ಣ. ಸುತ್ತ ಯಾರೂ ಇರದಿದ್ದಾಗಲೂ ಸರಿಯಾಗಿ ಇಟ್ಟಿಗೆಗಳನ್ನು ಜೋಡಿಸುತ್ತಿದ್ದ ಹುಡುಗ ತುಸು ದೂರದಿಂದಲೇ ಪರಿಚಿತವೆನಿಸಿದ. ಎದೆಯಲ್ಲೇನೋ ವಿಚಿತ್ರ ಸೆಳೆತ. 'ಎಲ್ಲಾ ಜೋಡಿಸಿದ ಮೇಲೆ ಚೆನ್ನಾಗಿ ನೀರು ಹಾಕಿ ನೆನೆಸು' ಎಂದ. ಸರಿ ಸಾರೆನ್ನುತ್ತ ಹುಡುಗ ತಿರುಗಿದಾಗ ನೋಡಿ ಅವಾಕ್ಕಾಗಿ ನಿಂತ ಕುಪ್ಪುಸ್ವಾಮಿ. 'ತಿಪ್ಪ... ನೀನಾ?' ಎಂದು ಕೇಳಿದಾಗ ತಲೆ ಕೆಳಗೆ ಹಾಕಿ 'ಹ್ಞೂಂ...' ಎಂದ ತಿಪ್ಪ. ಅವನ ಕಣ್ಣುಗಳಲ್ಲೂ ಅಚ್ಚರಿಯ ಜೊತೆ ಆನಂದದ ಸೆಳಕುಗಳು ಮಿಂಚಿದವು. 'ಚಿತ್ರದುರ್ಗದಿಂದ ಬಂದ ಹುಡುಗನಾ?' ಎಂದದ್ದಕ್ಕೆ ಹೌದೆಂದು ಕತ್ತಾಡಿಸಿದ.

ಕುಪ್ಪುಸ್ವಾಮಿಯ ಸಿಟ್ಟು ಒಮ್ಮೆಲೆ ಸ್ಫೋಟಿಸಿತು. 'ಎಲ್ಲಿಗೆ ಹೋಗಿದ್ದೋ ಹಡಬೆ ಮಗನೆ? ನಿನ್ನ ಹುಡಿಕ್ಕಂಡು ಬೀದಿ ಬೀದಿ ಅಲೆದ್ನಲ್ಲೋ. ನಿನ್ನ ನೆನಿಸ್ಕೊಂಡು ಉಣ್ಣದೇನೆ ನಿಮ್ಮವ್ವ, ತಂಗೀರು ಕಣ್ಣೀರಲ್ಲೇ ಕೈ ತೊಳದ್ರಲ್ಲೋ' ಎಂದವನೇ ಕೆನ್ನೆಗೆ ಒಂದೇಟು ಕೊಟ್ಟ. ಫಟೀರ್ ಎನ್ನುವ ಸದ್ದು ಕೇಳಿ 'ಏನಾಯ್ತು?' ಎಂದು ಬೇರೆ ಆಳುಗಳು ಬಂದಾಗ 'ಏನಿಲ್ಲ. ಇಟ್ಟಿಗೆ, ಜಲ್ಲಿಕಲ್ಲು ಬಿತ್ತು' ಎಂದು ತಿಪ್ಪ ಸುಧಾರಿಸಿಕೊಂಡ. ಕೆನ್ನೆ ಮೇಲೆ ಕೈಯಾಡಿಸಿಕೊಳ್ಳುತ್ತ ಮತ್ತೆ ಇಟ್ಟಿಗೆಗಳನ್ನು ಜೋಡಿಸಿದ. ತುಟಿ ಹಲ್ಲಿಗೆ ತಗುಲಿ ಕೊಂಚ ರಕ್ತವೂ ಒಸರಿತ್ತು. ಅಷ್ಟರಲ್ಲೇ ಕುಪ್ಪುಸ್ವಾಮಿಯ ಮೊಬೈಲ್ ರಾಗ ಹಾಡಿತು. 'ಹೊಸಬ್ರು... ನೀವಿಬ್ರೂ ಮೊಮ್ಮದನ ಜೊತೆ ನಡೀರಿ. ಟೈಲ್ಸ್ ಆರಿಸಿ ಆಗಿದೆಯಂತೆ. ಡೆಲಿವರಿ ತೆಕ್ಕೊಂಡು ಬರಬೇಕು. ಉಳಿದವರೆಲ್ಲಾ ಕೆಲಸಾ ನೋಡ್ಕೊಳ್ಳಿ' ಎಂದು ಆಜ್ಞಾಪಿಸಿದ. ತಿಪ್ಪ ಅವನ ಬೈಕ್ ಏರಿದರೆ ಇನ್ನೊಂದು ಗಾಡಿ ಅವರನ್ನು ಹಿಂಬಾಲಿಸಿತು.

ಎರಡೂ ಗಾಡಿಗಳು ಹೊಸ ಟೈಲ್ಸ್ ಅಂಗಡಿಯ ಮುಂದೆ ನಿಂತಾಗ ಮಾಲೀಕರು ತಮಗೆ ಬೇಕಾದ ಮಾದರಿಯ ಟೈಲ್ಸ್ ಆರಿಸಿ ದುಡ್ಡೂ ಕೊಟ್ಟಾಗಿತ್ತು. ಬಾಕ್ಸ್‌ಗಳನ್ನು ಒಂದೊಂದಾಗಿ ಅಂಗಡಿಯವರು ತರುತ್ತಿದ್ದಂತೆ ಮೂವರೂ ಸೇರಿ ವ್ಯಾನ್ ಒಳಗೆ ಸರಿಯಾಗಿ ಜೋಡಿಸಲು ಆರಂಭಿಸಿದರು. ಕುಪ್ಪಣ್ಣ, 'ಎಣಿಸಿಕೊಳ್ಳಿ... ಒಡೀದಂತೆ ಜೋಡಿಸಿ. ಜಾಗ್ರತೆ' ಎನ್ನುತ್ತ ನಿಂತ. ಅಂಗಡಿಯ ಮಾಲೀಕ ತಮ್ಮ ಕಾಯಂ ಗಿರಾಕಿಯಾದ ಕುಪ್ಪುಸ್ವಾಮಿಯನ್ನು ಆದರದಿಂದ ಕರೆದು ಕಾಫಿ ಕೊಟ್ಟು ಮಾತನಾಡಿಸಿ ಹೋದ. ಕುಪ್ಪಣ್ಣ ಕಾಫಿ ಹಿಡಿದುಕೊಂಡು ಶವರ್‌ಗಳನ್ನು ಪೇರಿಸಿದ ಮೂಲೆಗೆ ಬಂದು ಹೀರಲಾರಂಭಿಸಿದ. ಒಂದೊಂದೇ ತೊಟ್ಟು ಒಳಸೇರುತ್ತಿದ್ದಂತೆ ಮನಸ್ಸು ಹಿಂದಕ್ಕೆ ಓಡಿತು.

ಕುಪ್ಪಣ್ಣ ಮನೆ ಕಟ್ಟುವ ಕೆಲಸಕ್ಕೆ ಸೇರಿಕೊಂಡದ್ದು ಎಳವೆಯಲ್ಲಿಯೇ. ತುಮಕೂರಿನಲ್ಲೇ ಅವನ ಮನೆಯೆಂಬ ಗುಡಿಸಲು ಇದ್ದಿದ್ದು. ಅವನಪ್ಪ ಮುತ್ತುಸ್ವಾಮಿಯ ನಾಲ್ಕು ಮಕ್ಕಳಲ್ಲಿ ಇವ ಎರಡನೆಯವನು. ಅಕ್ಕನಿಗಾಗಲೇ ಮದುವೆಯಾಗಿ

